ಗುಂಡ್ಲು ಪೇಟೆಯಲ್ಲಿ IDS MT ಯೋಜನೆ ಕೈಗೊಳ್ಳುವ ಬಗ್ಗೆ

54 (4) : ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಂಡ್ಲುಪೇಟೆ ಪಟ್ಟಣದಲ್ಲಿ ಐ.ಡಿ.ಎಸ್.ಎಂ.ಟಿ ಯೋಜನೆ ಕೈಗೊಳ್ಳಲಾಗಿದೆಯೇ;

ಆ) ಕೈಗೊಂಡಿದ್ದರೆ, ಈವರೆಗೆ ಬಿಡುಗಡೆಯಾಗಿರುವ ಹಣವೆಷ್ಟು? ಕೈಗೊಂಡಿರುವ ಕಾಮಗಾರಿಯ ವಿವರಗಳನ್ನು ನೀಡುವುದು;

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ಸಚಿವರು) :

ಅ) ಕೈಗೊಳ್ಳಲಾಗಿದೆ

ಆ) ಈವರೆವಿಗೂ 25 ಲಕ್ಷ ರೂಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾಗಿದ್ದು, ಸದರಿ ಮೊತ್ತದಲ್ಲಿ ವಾಣಿಜ್ಯ ಸಂಕೀರ್ಣ ಕಾಮಗಾರಿಗಳನ್ನು ಕೈಗೊಳ್ಳಲು ವಿನಿಯೋಗಿಸಲಾಗಿದೆ.

ಭಟ್ಕಳ ತಾಲ್ಲೂಕಿನ ಎ.ಡಿ.ಬಿ. ಕಾಮಗಾರಿಯ ಬಗ್ಗೆ

56 (72) : ಶ್ರೀ ನಾಯಕ್ ಜೆ.ಡಿ (ಭಟ್ಕಳ) ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೆ.ಯು.ಐ.ಡಿ.ಎಫ್.ಸಿ. ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಟ್ಕಳ ತಾಲ್ಲೂಕು ಎಡಿಬಿ ಯೋಜನೆಗೆ ಎಷ್ಟು ಹಣ ಸರ್ಕಾರದಿಂದ ಮಂಜೂರಾಗಿದೆ; ಎಷ್ಟು ಕಾಮಗಾರಿ ಮಂಜೂರಾಗಿ ಟೆಂಡರ್ ಆಗಿದೆ; ಟೆಂಡರ್ ಪಡೆದ ಕಂಪನಿಗಳ ವಿವರ ಹಾಗೂ ಎಷ್ಟು ಯೋಜನೆ ಟೆಂಡರ್‌ಗೆ ಬಾಕಿ ಇದೆ. ತಿಳಿಸುವುದು?

ಆ) ಟೆಂಡರ್ ಆದ ಕಾಮಗಾರಿಗಳು ಪೂರ್ತಿ ಕಳಪೆ ಮಟ್ಟದಾಗಿದ್ದು ಆಮೆಗತಿಯಲ್ಲಿ ಕಾಮಗಾರಿ ನಡೆಯುತ್ತಿದ್ದು, ಕೆಲವು ಟೆಂಡರುದಾರರು ಗುತ್ತಿಗೆ ಕೆಲಸ ಬಿಟ್ಟು ಓಡಿಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀಮತಿ ನಫೀಸ್ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೆ.ಯು.ಐ.ಡಿ.ಎಫ್.ಸಿ. ರಾಜ್ಯ ಸಚಿವರು) :

ಅ) ಏಷ್ಯನ್ ಅಭಿವೃದ್ಧಿ ಬ್ಯಾಂಕ್‌ನ ಆರ್ಥಿಕ ನೆರವಿನ ಕರ್ನಾಟಕ ನಗರಾಭಿವೃದ್ಧಿ ಮತ್ತು ಕರಾವಳಿ ಪರಿಸರ ನಿರ್ವಹಣೆ ಯೋಜನೆಯಡಿಯಲ್ಲಿ ಭಟ್ಕಳ ಪಟ್ಟಣಕ್ಕೆ ಒಟ್ಟು ರೂ. 35.23 ಕೋಟಿ ಮಂಜೂರಾಗಿದೆ. ಒಟ್ಟು 16 ಕಾಮಗಾರಿಗಳು ಮಂಜೂರಾಗಿದ್ದು ಅದರಲ್ಲಿ 10 (Package) ಕಾಮಗಾರಿಗಳಿಗೆ ಗುತ್ತಿಗೆದಾರರನ್ನು ನೇಮಿಸಲಾಗಿದ್ದು ಅವರ ವಿವರ ಕೆಳಕಂಡಂತಿದೆ;

ಗುತ್ತಿಗೆದಾರರು

1) ಮೆ: ವಿ.ಎನ್. ಮಾಕ್ಕೇ, ಮುಂಬಯಿ
2) ಮೆ: ವೋಲ್ಟಾಸ್ ಲಿಮಿಟೆಡ್, ಚೆನ್ನೈ
3) ಮೆ ಕೊರಮಂಡಲ್ ಪ್ರೆಸ್ಟಕ್ರೀಟ್ ಪ್ರೈವೇಟ್ ಲಿಮಿಟೆಡ್, ಹೈದರಾಬಾದ್
4) ಮೆ: ಶ್ರೀರಾಮ ಇಂಜಿನಿಯರಿಂಗ್ ಕನಸ್ಟ್ರಕ್ಷನ್ ಕಂಪನಿ ಲಿಮಿಟೆಡ್, ಚೆನ್ನೈ (ಎರಡು ಪ್ಯಾಕೇಜ್‌ಗಳು)
5) ಮೆ: ಪೆಟ್ರಾನ್ ಸಿವಿಲ್ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್, ಮುಂಬಯಿ